ಅಧ್ಯಕ್ಷರು :- ಉಳಿದ ಇನ್ನಿಬ್ಬರು ಸದಸ್ಯರು ಅರ್ಧಗಂಟೆ ನಂತರ ಪ್ರಮಾಣ ವಚನ ಸ್ವೀಕಾರ ಮಾಡುತ್ತೇವೆ ಎಂದು ಕೇಳಿಕೊಂಡಿದ್ದಾರೆ. ಅರ್ಧ ಗಂಟೆ ನಂತರ ಅವರು ಪ್ರಮಾಣ ವಚನ ಸ್ವೀಕರಿಸುತ್ತಾರೆ.

2. ಸಂತಾಪ ಸೂಚನೆ

ವಿಷಯ :- ವಿಧಾನಸಭೆಯ ಮಾಜಿ ಸದಸ್ಯ ವಿ.ಎಸ್.ಕುಬಿಹಾಳ್ ಅವರ ನಿಧನದ ಬಗ್ಗೆ.

ಅಧ್ಯಕ್ಷರು :- ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ಎಸ್.ಕುಬಿಹಾಳ್ ಅವರು ದಿನಾಂಕ: 8.11.2008 ರಂದು ನಿಧನರಾಗಿರುವುದನ್ನು ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1930ನೇ ಮೇ 4 ರಂದು ಧಾರವಾಡ ಜಿಲ್ಲೆ ಕುಂದಗೋಳ್ ತಾಲ್ಲೂಕು ಮತ್ತಿಘಟ್ಟಿ ಗ್ರಾಮದಲ್ಲಿ ಜನಿಸಿದ್ದ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ಮತ್ತಿಘಟ್ಟ ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಏಳನೇ ವಿಧಾನಸಭೆಗೆ ಕುಂದಗೋಳ್ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಇಡೀ ಸದನ ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು :- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

3. ಕಾರ್ಯದರ್ಶಿಯವರ ವರದಿ

ಶ್ರೀ ಎಸ್.ಬಿ. ಪಾಟೀಲ್,ಕಾರ್ಯದರ್ಶಿ :- ಗೌರವಾನ್ವಿತ ಸಭಾಧ್ಯಕ್ಷರ ಅನುಮೋದನೆಯ ಮೇರೆಗೆ ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಈಗ ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಡಾ. ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) :- ಮಾನ್ಯ ಅಧ್ಯಕ್ಷರೆ, 1956ರ ಕಂಪನಿಗಳ ಅಧಿನಿಯಮದ 619 (ಎ) (2) ಪ್ರಕರಣದ ಮೇರೆಗೆ:-

1. ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ, ಬೆಂಗಳೂರು ಇದರ 2007-08ನೇ ಸಾಲಿನ 42ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ 2007-08ನೇ ಸಾಲಿನ 5ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951ರ ಕಲಂ 37 (6) (7) ರ ಪ್ರಕಾರ :-

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2006-07ನೇ ಸಾಲಿನ 48ನೇ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ ಮತ್ತು 2007-08ನೇ ಸಾಲಿನ 49ನೇ ವಾರ್ಷಿಕ ವರದಿ.

1952ರ ವಿಚಾರಣಾ ಆಯೋಗದ ಕಾಯ್ದೆಯ ಕಲಂ 3 (4)ರ ಪ್ರಕರಣದ ಮೇರೆಗೆ :-

1. ನ್ಯಾಯಮೂರ್ತಿ ಕೆ.ರಾಮಚಂದ್ರಯ್ಯ ವಿಚಾರಣಾ ಆಯೋಗದ (ಸಂಪುಟ 1-11) ರ ವರದಿ.

ಭಾರತ ಸಂವಿಧಾನದ ಅನುಚ್ಛೇದ 323 (2)ರ ಪ್ರಕರಣದ ಮೇರೆಗೆ :-

1. ಕರ್ನಾಟಕ ಲೋಕಸೇವಾ ಆಯೋಗದ 2006-07ನೇ ಸಾಲಿನ ವಾರ್ಷಿಕ ವರದಿ.

ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕರಣ 12 (5)ರ ಪ್ರಕರಣದ ಮೇರೆಗೆ :-

1. ಶ್ರೀ ಎ.ಎನ್.ಶ್ರೀಕಾಂತ್, ಐ.ಎ.ಎಸ್.ರವರ ವಿರುದ್ಧ ಸಲ್ಲಿಸಲಾದ ವಿಶೇಷ ವರದಿ.

1956ರ ಕಂಪನಿಗಳ ಅಧಿನಿಯಮದ 619 (ಎ) (2) ಪ್ರಕರಣದ ಮೇರೆಗೆ :-